


ಇದೂ ಕನ್ನಡ ಚಿತ್ರ!

ನಾಗೇಂದ್ರ ರಾವ್ ಅವರದು. ಸುಲೋಚನಾ ರೂಪುಗೊಳ್ಳುವ ವೇಳೆಗಾಗಲೇ ನಾಗೇಂದ್ರ ರಾವ್ ತಮಿಳು ಚಿತ್ರರಂಗದಲ್ಲಿ ಬೇಡಿಕೆಯ ಕಲಾವಿದರಾಗಿ ರೂಪುಗೊಂಡಿದ್ದರು. ಹಿಂದಿ ಸಿನಿಮಾಗಳಲ್ಲೂ ಗುರ್ತಿಸಿಕೊಂಡಿದ್ದರು. ಆದರೆ, ಕನ್ನಡ ಸಿನಿಮಾ ರೂಪಿಸುವ, ಕನ್ನಡ ಚಿತ್ರಗಳಲ್ಲಿ ಅಭಿನಯಿಸುವ ಆಸೆ ಅವರನ್ನು ಕೊರೆಯುತ್ತಲೇ ಇತ್ತು. ಈ ನಿಟ್ಟಿನಲ್ಲಿ ಅವರಿಗೆ ನೆಪವಾಗಿ ಒದಗಿಬಂದುದು 'ಸತಿ ಸುಲೋಚನಾ'. ಈ ಸಿನಿಮಾದ ನಿರ್ಮಾಪಕ ಶಾ ಚಮನ್‌ಲಾಲ್ ಡುಂಗಾಜಿ ಬೆಂಗಳೂರಿನಲ್ಲಿ ಉದ್ಯಮಿಯಾಗಿ ನೆಲೆ ಕಂಡವರು. ತಮಗೊಂದು ವಿಳಾಸ ಒದಗಿಸಿದ ನಾಡು–ನುಡಿಗೆ ಏನನ್ನಾದರೂ ಮರಳಿಸಬೇಕು ಎನ್ನುವ ಅವರ ಹಂಬಲವೇ ಸುಲೋಚನಾ ರೂಪದಲ್ಲಿ ಸಾಕಾರಗೊಂಡಿತು. ಕನ್ನಡ ಚಿತ್ರರಂಗದ ಮೊದಲ ಸಿನಿಮಾದ ಹಿನ್ನೆಲೆಯಲ್ಲಿಯೇ ವ್ಯಾಪಾರಿ ಸಾಧ್ಯತೆಗಳಿಗಿಂತಲೂ ಹೆಚ್ಚಾಗಿ ಚಿತ್ರ ನಿರ್ಮಾತೃಗಳ ಕನ್ನಡದ ಬದ್ಧತೆಗೆ ಇದಕ್ಕಿಂತಲೂ ಬೇರೆ ಉದಾಹರಣೆ ಬೇಕೆ? 'ನಾವು ಮೈಸೂರು ರಾಜ್ಯದಲ್ಲಿದ್ದೇವೆ. ಈ ದೇಶದ ಮಾತೃಭಾಷೆಯಾದ ಕನ್ನಡದಲ್ಲಿ ಯಾಕೆ ಚಿತ್ರ ತೆಗೆಯಬಾರದು' ಎನ್ನುವ ಡುಂಗಾಜಿ ಅವರ ಯೋಚನೆಯನ್ನು ಇಂದಿನ ಯುವ ಚಿತ್ರ ನಿರ್ಮಾತೃಗಳಲ್ಲಿ ಕಾಣುವುದು ಕಷ್ಟ.

ಸಿನಿಮಾ ಮಾಡುವುದಕ್ಕಿಂತಲೂ ಕಲ್ಲು–ಕಬ್ಬಿಣದ ವ್ಯಾಪಾರ ಮಾಡುವುದು ಲೇಸು ಎನ್ನುವ ನಂಬಿಕೆ ಚಾಲ್ತಿಯಲ್ಲಿದ್ದ ಸಂದರ್ಭದಲ್ಲಿ ರೂಪುಗೊಂಡ 'ಸತಿ ಸುಲೋಚನಾ' ಕನ್ನಡದ ಮೊದಲ ವಾಕ್ಚಿತ್ರವಾಗಿ ಮಾತ್ರವಲ್ಲದೆ, ಕನ್ನಡದ–ಕನ್ನಡಿಗರ ಮಾನಸಿಕ ಏಕತೆಯ ಹಂಬಲದ ರೂಪಕವಾಗಿಯೂ ಮುಖ್ಯವಾದುದು. ಬಹುಶಃ, ರಂಗಭೂಮಿಯಿಂದ ಸ್ವಲ್ಪಮಟ್ಟಿಗೆ ಸಾಧ್ಯವಾಗಿದ್ದ ಈ ಏಕೀಕರಣ 'ಸತಿ ಸುಲೋಚನಾ' ಮೂಲಕ ಬಹುದೊಡ್ಡ ರೂಪದಲ್ಲಿ ಸಾಧ್ಯವಾಯಿತು.

ಕನ್ನಡ ಬದ್ಧತೆಯ ಮತ್ತೊಂದು ಉದಾಹರಣೆ 'ರಣಧೀರ ಕಂಠೀರವ'. ರಾಜಕುಮಾರ್, ಜಿ.ವಿ.

